ಶ್ರೀ ಕೆ. ಎಂ. ನಾಗಣ್ಣ.—ಈಗ ಬೆಲೆ 150 ರಿಂದ 500 ರೂಪಾಯಿ ಇದ್ದರೂ ನನ್ನ ಆಕ್ಷೇಪಣೆ ಇಲ್ಲ. ಆದರೆ ರೇಶ್ಮೆಯಲ್ಲಿ ತಯಾರಾದ ಬಟ್ಟೆಗೆ ಸರಿಯಾದ ಬೆಲೆ ಬರುವುದಕ್ಕೆ ಸರ್ಕಾರದವರು ಒಂದು ವ್ಯವಸ್ಥೆ ಮಾಡಬೇಕು. ಹಿಂದೆ ಕೆ. ಎಚ್. ರಾಮಯ್ಯನವರ ಒಂದು ಕೋಪರೇಟಿವ್ ಸೊಸೈಟಿ ಇತ್ತು. ನಾನೂ ಅಲ್ಲಿ ಹುಡುಗನಾಗಿದ್ದಾಗ ಕೆಲಸ ಮಾಡಿದ್ದೆ. ಆಗ ಯಾವ ಮುದುವೆ ಮುಂಜಿ ಗಾದರೂ ಜನರು ಆದರ ಮುಖಾಂತರವೇ ಬಟ್ಟೆ ಬರೆಗಳನ್ನು ಕೊಂಡುಕೊಳ್ಳುತ್ತಿದ್ದರು. ಅವರು ಕೇವಲ ರೂಪಾಯಿಯಲ್ಲಿ ಒಂದು ಆಣೆ ಲಾಭ ಇಟ್ಟುಕೊಂಡಿದ್ದರು. ಅದು ಚೆನ್ನಾಗಿ ನಡೆಯುತ್ತಿತ್ತು. ಆ ಕಾಲದಲ್ಲಿ ಜನಸಂಖ್ಯೆ ಕಡಿಮೆ ಇದ್ದಾಗ, ಮಗ್ಗಗಳು ಕಡಿಮೆ ಇದ್ದಾಗ ಅನೇಕ ಜನರಿಗೆ ಆದು ಸಹಾಯಕವಾಗಿತ್ತು. ಆದ್ದರಿಂದ ರೇಶ್ಮೆ ಒಂದು ಕೆ. ಜಿ.ಗೆ ಒಂದು ಸಾವಿರ ರೂಪಾಯಿ ತೆಗೆದುಕೊಂಡರೂ ಆದರಲ್ಲಿ ತಯಾರಾದಂತಹ ಬಟ್ಟೆಗೆ ಸರಿಯಾದ ಬೆಲೆ ಸಿಗುವಂತೆ ಒಂದು ಏರ್ಪಾಡನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Sri D. DEVARAJ URS.—I have already said that I am going to invite all these persons who are affected and who have knowledge of special conditions with regard to this trade. Let us have a sort of dicsussion. ತಮ್ಮನ್ನು ಕರೆಸುತ್ತೇನೆಂದು ಆಗಲೇ ಹೇಳಿದ್ದೇನೆ. ಆದರ ಬಗ್ಗೆ ಯಾವ ರೀತಿಯಲ್ಲಿ ಮಾಡಬೇಕೆಂಬುದರ ಬಗ್ಗೆ ತಮ್ಮ ಸಲಹೆಗಳನ್ನು ತೆಗೆದುಕೊಂಡು ಮಾಡೋಣ ಎಂದು ಹೇಳಿದ್ದೇನೆ.

Sri K. M. NAGANNA.—In view of the assurance given by the Chief Minister, I seek permission of the House to withdraw the resolution

The Resolution was by leave withdrawn.

Mr. CHAIRMAN.—Next Resolution by Sri Gopinath R. Sandra.

re : (3) the Steep fall in the Prices of Cotton Resulting in hardships to the Cotton growers.

ಶ್ರೀ ಗೋಪಿನಾಥ್ ಆರ್. ಸಂದ್ರ (ಹುಬ್ಬಳ್ಳಿ-ಗ್ರಾಮಾಂತರ).—ಸ್ವಾಮಿ ನಾನು ಈ ನಿರ್ಣಯವನ್ನು ಇಲ್ಲಿ ಮಂಡಿಸುತ್ತೇನೆ.

"ರಾಜ್ಯದಲ್ಲಿನ ಹತ್ತಿ ಬೆಲೆಯು ಕುಸಿತದಿಂದಾಗಿ ಹತ್ತಿಬೇಸಾಯಗಾರರಿಗೆ ತೊಂದರೆಯುಂಟಾಗಿರುವ ಬಗ್ಗೆ ಈ ಸಭೆಯವರು ವಿಷಾದವನ್ನು ವ್ಯಕಪಡಿಸಿ ಹತ್ತಿಯನ್ನು ಕೊಂಡುಕೊಳ್ಳುವಂತೆ ವ್ಯವಸ್ಥೆ ಮಾಡುವ ಮೂಲಕ ರಾಜ್ಯದಲ್ಲಿನ ಹತ್ತಿ ಬೇಸಾಯಗಾರರ ತೊಂದರೆಗಳನ್ನು ನಿವಾರಿಸುವಂತೆ ಭಾರತ ಸರ್ಕಾರ ಹಾಗೂ ಭಾರತದ ಹತ್ತಿ ಸಂಸ್ಥೆಯವರಿಗೆ ಶಿಫಾರಸು ಮಾಡಬೇಕೆಂದು ಈ ಸಭೆಯವರು ಸರ್ಕಾರದವರನ್ನು ಒತ್ತಾಯಪಡಿಸುತ್ತಾರೆ."

Mr. CHAIRMAN.—Resolution moved :

"that this Assembly views with great concern the steep fall in the prices of cotton, resulting in hardship to the cultivators of cotton, and urges upon the Government to recommend to the Government of India and the Cotton Corporation of India to arrange for buying the cotton grown in the State in order to alleviate the distress of the cotton growers in the State."

†ಶ್ರೀ ಗೋಪಿನಾಥ್ ಆರ್. ಸಂದ್ರ.—ಸ್ವಾಮಿ, ನಾನು ಇದರ ಬಗ್ಗೆ ಒಂದೆರಡು ಮಾತು ಗಳನ್ನು ಹೇಳಬಯಸುತ್ತೇನೆ. ನಾನು ಹತ್ತಿ ಬೆಳೆಯತಕ್ಕಂತಹ ಹುಬ್ಬಳ್ಳಿ ಗ್ರಾಮಾಂತರ ಪ್ರದೇಶ ದಿಂದ ಬಂದಿರುವವನಾಗಿದ್ದೇನೆ. ಧಾರವಾಡ ಜಿಲ್ಲೆಯಲ್ಲಿ ಯಾವತ್ತೂ ಹತ್ತಿ ಬೆಳೆಯುವುದಕ್ಕೆ ಪ್ರಾಶಸ್ತ್ಯ ಕೊಟ್ಟುಕೊಂಡು ಬಂದಿದ್ದಾರೆ. ಆದರೆ ಆಲ್ಲಿ ಈಗ ಇರತಕ್ಕಂತದ್ದು ಒಂದು ಜಟಿಲವಾದ ಪ್ರಶ್ನೆಯಾಗಿದೆ. ಹತ್ತಿ ಬೆಳೆದಂತಹ ರೈತರು ಇವೊತ್ತಿನ ದಿವಸ ನಮ್ಮ ಮೈಸೂರು ರಾಜ್ಯದಲ್ಲಿ ಬಹಳ ಮಂದಿ ಇದ್ದಾರೆ. ಸುಮಾರು 10 ಲಕ್ಷ ಎಕರೆಗಳಲ್ಲಿ ಈ ಬೆಳೆಯನ್ನು ಮಾಡುತ್ತಿದ್ದಾರೆ. ದುರ್ದೈವದಿಂದ ಈ ಒಂದು ಸಮಸ್ಯೆ ಬಹು ದೊಡ್ಡ ಸಮಸ್ಯೆಯಾಗಬಾರದಾಗಿತ್ತು. ಕಳೆದ ಎರಡು ವರ್ಷಗಳಿಂದ ಈ ಸಮಸ್ಯೆ ಉದ್ಭವವಾಗಿದೆ. ಕಳೆದ ಪಾರ್ಲಮೆಂಟರಿ ಚುನಾವಣೆಯಲ್ಲಿ ನಮ್ಮ ಪಕ್ಷದವರು ಗೆದ್ದಾಗ ಬಹಳವಾದ ಆಶ್ವಾಸನೆಗಳನ್ನು ಜನರಿಗೆ ಕೊಟ್ಟಿದ್ದೇವೆ. ರೈತರ ಅಭಿವೃದ್ಧಿ ಗೋಸ್ಕರ ಅವರನ್ನು ಉದ್ಧಾರ ಮಾಡುವುದಕ್ಕೋಸ್ಕರ ನಾವು ಕೆಲಸ ಮಾಡುತ್ತೇವೆಂದು ಆಶ್ವಾಸನೆ ಗಳನ್ನು ಕೊಟ್ಟಿದ್ದೇವೆ. ಚುನಾವಣೆ ಆದಮೇಲೆ ಜನರು ನಮ್ಮನ್ನು ಕೇಳಲಕ್ಕೆ ಸುರು ಮಾಡಿದ್ದಾರೆ. ಅಲ್ಲದೆ ರೈತರು ತಾವು ಬೆಳೆದ ಹತ್ತಿಯನ್ನು ಬಜಾರಿಗೆ ತೆಗೆದುಕೊಂಡು ಹೋದಾಗ ಅಲ್ಲರುವ ದಳ್ಳಾಳಿಗಳು ನೀವು ಇಂದಿರಾ ಗಾಂಧಿಯವರ ಹತ್ತಿರ ಹೋಗಿ- ಅವರು ನಿಮ್ಮ ಹತ್ತಿಯನ್ನು ಕೊಂಡು ಕೊಳ್ಳುತ್ತಾರೆ ಎಂದೆಲ್ಲಾ ಹೇಯಾಳಿಸಿ ಬೈಯ್ದಿದ್ದಾರೆ. ಹಾಗೆ ಅಲ್ಲಿರುವ ಜನರು ಆಡಿದ ಮಾತು ಗಳನ್ನು ನಮ್ಮ ನಾಯಕರಾದ ಶ್ರೀ ದೇವರಾಜ ಅರಸರಿಗೂ ಕೂಡ ತಿಳಿಸಿದ್ದೇವೆ. ದುರ್ದೈವದಿಂದ ಆಗ ರಾಷ್ಟ್ರಪತಿ ಆಡಳಿತ ನಮ್ಮ ರಾಜ್ಯದಲ್ಲಿ ಇತ್ತು. ಆಗ ನಮ್ಮ ಉದ್ದೇಶವನ್ನು ಏನೂ ಸಾಧಿಸ ಲಾಗಲಿಲ್ಲ. ನಮ್ಮ ಮೈಸೂರು ಪ್ರದೇಶ ಕಾಂಗ್ರೆಸ್ ಪಕ್ಷದವರು ಚುನಾವಣೆಯ ಪ್ರಣಾಳಿಕೆಯಲ್ಲಿ ರೈತರ ಸೇವೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಈಗ ನಮ್ಮ ಸರ್ಕಾರದವರು ಮಾಡ ಬೇಕೆಂದು ರೈತರು ಕೇಳುತ್ತಿದ್ದಾರೆ. ಇದು 10 ಲಕ್ಷ ಎಕರೆ ಜಮೀನಿನಲ್ಲಿ ಬೆಳೆ ತೆಗೆಯತಕ್ಕ ರೈತರಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಇವೊತ್ತಿನದಿವಸ ರೈತರ ಮನೆಗಳಲ್ಲಿ ಹಣದ ಮುಗ್ಗಟ್ಟಿನಿಂದ ಜರುಗಬೇಕಾದಂತಹ ಲಗ್ನಗಳು ಆಗುತ್ತಾ ಇಲ್ಲ; ಒಕ್ಕಲುತನದ ಅಭಿವೃದ್ಧಿಗೋಸ್ಕರ ಹಣ ದೊರಕದೆ ಎಲ್ಲರೂ ಬಹಳ ಕಳವಳದಿಂದ ಇದ್ದಾರೆ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕೆನ್ನುವ ವಿಚಾರದಲ್ಲಿ ಸರ್ಕಾರದವರು ಕೂಡಲೇ ಒಂದು ಕ್ರಮವನ್ನು ತೆಗೆದುಕೊಂಡು, ಇದನ್ನು ಹೋಗಲಾಡಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. CHAIRMAN.—The House will now rise and meet on Monday, the 10th April 1972, at 1-00 P.M.

The House adjourned at One of the Clock to meet again at one of the Clock on Monday, the 10th April 1972.

WD 17260—GPB—550—10-7-1972